| KARNATAKA MARITIME BOARD<br>BENGALURU | | |
|---|---|---|
| Name of the Newspaper | **HOSADIGANTHA** | |
| Date | 24-08-2024 | **Language – KANNADA** |

ಹೊಸ ದಿಗಂತ

2

24 Aug 2024

# ಮಂಗಳೂರಿಗೆ ಬರಲಿದೆ ಇನ್ನೊಂದು ಬಂದರು

## ಕರ್ನಾಟಕ ಜಲಸಾರಿಗೆ ಮಂಡಳಿಯಿಂದ ಪಂಚ ಯೋಜನೆ | ಹಳೇ ಬಂದರು ಪುನಶ್ಚೇತನಕ್ಕೆ ಮಾಸ್ಟರ್ ಪ್ಲ್ಯಾನ್

• ನೆಲ್ಲಿಜೆ ನವ್ಯಜ್ಯೋತಿ

**ಬೆಂಗಳೂರು:** ಮಂಗಳೂರಿನಲ್ಲಿ ಜಲಸಾರಿಗೆ ಮತ್ತಷ್ಟು ವ್ಯಾಪಕವಾಗಿಸಲು ಪಣ ತೊಟ್ಟಿರುವ ಕರ್ನಾಟಕ ಜಲಸಾರಿಗೆ ಮಂಡಳಿಯು ಪಂಚ ಯೋಜನೆಗಳನ್ನು ಹಾಕಿಕೊಂಡಿದೆ. ಎರಡನೇ ಬಂದರು ಕೂಡ ನಿರ್ಮಾಣಗೊಂಡು ನಿಜಾರ್ಥದಲ್ಲಿ ಬಂದರು ನಗರಿಯೇ ಆಗಲಿದೆ.

ಮಂಡಳಿಯ ಐದು ಯೋಜನೆಗಳ ಪೈಕಿ ಪ್ರಮುಖವಾಗಿರುವುದು ವಾಟರ್ ಮೆಟ್ರೋ. ಜಲ ಮೆಟ್ರೋ ಸೇವೆಯನ್ನು ಮಂಗಳೂರಿನ ಫಲ್ಗುಣಿ (ಗುರುಪುರ) ಹಾಗೂ ನೇತ್ರಾವತಿ ನದಿಗಳಲ್ಲಿ ಪರಿಚಯಿಸಲಾಗುತ್ತದೆ. ಸದ್ಯ ಸರ್ಕಾರ ಈ ಜಲ ಮೆಟ್ರೋ ಯೋಜನೆಯನ್ನು ಅಂದಾಜು 1,600 ಕೋಟಿ ರೂ. ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಮುಂದಾಗಿದೆ. ಡಿಪಿಆರ್ ತಯಾರಿ ಪ್ರಗತಿಯಲ್ಲಿದ್ದು, ಅದು ಸಿದ್ಧವಾದ ನಂತರ ಯೋಜನೆಯ ಮೊತ್ತವೆಷ್ಟೆಂಬುದು ಗೊತ್ತಾಗಲಿದೆ.

**17 ಜೆಟ್ಟಿಗಳಲ್ಲಿ ಜಲ ಮೆಟ್ರೋ ಸೇವೆ:** ಫಲ್ಗುಣಿ ನದಿಯಲ್ಲಿ ಮರವೂರು ಸೇತುವೆಯಿಂದ ಕೂಳೂರು, ತಣ್ಣೀರು ಬಾವಿ ಮೂಲಕ ನೇತ್ರಾವತಿ ನದಿಯಲ್ಲಿ ಉಳ್ಳಾಲದವರೆಗೆ ಈ ಜಲ ಮೆಟ್ರೋ ಕಾರ್ಯಾಚರಿಸಲಿದೆ. ಸುಮಾರು 17 ಕಿ.ಮೀ. ಅಂತರದಲ್ಲಿ ಒಟ್ಟು 17 ಜೆಟ್ಟಿಗಳು ಬರಲಿವೆ. ಈಗಾಗಲೇ ಬೇರೆ ಬೇರೆ ಯೋಜನೆಯಲ್ಲಿ 10 ಜೆಟ್ಟಿಗಳು ನಿರ್ಮಾಣವಾಗುತ್ತಿವೆ. ಈ ಜೆಟ್ಟಿಗಳನ್ನು ಜಲ ಮೆಟ್ರೋ ಯೋಜನೆಯಲ್ಲಿ ಸಂಯೋಜಿಸಲಾಗುತ್ತದೆ. ಹಾಗಾಗಿ, ಜಲ ಮೆಟ್ರೋಗೆ ಹೊಸದಾಗಿ ಏಳು ಜೆಟ್ಟಿಗಳಷ್ಟೇ ನಿರ್ಮಿಸಬೇಕಾಗುವುದರಿಂದ ಯೋಜನಾ ವೆಚ್ಚ ಕಡಿತವಾಗುವ ನಿರೀಕ್ಷೆಯಿದೆ. ಜೆಟ್ಟಿಗಳಲ್ಲಿ ಇಳಿದ ಪ್ರಯಾಣಿಕರಿಗೆ ಸಾರಿಗೆ ಬಸ್ಸಿನ ಸಂಪರ್ಕವನ್ನೂ ಕಲ್ಪಿಸಲಾಗುತ್ತದೆ.

**ಏನಿದು ಜಲ ಮೆಟ್ರೋ ಯೋಜನೆ?** ಕೇರಳದ ಕೊಚ್ಚಿಯಲ್ಲಿ ಬಿಟ್ಟರೆ ದೇಶದ ಯಾವುದೇ ಭಾಗದಲ್ಲಿ ಜಲ ಮೆಟ್ರೋ ಸೇವೆ ಇಲ್ಲ. ಜಲ ಮೆಟ್ರೋ ಸಣ್ಣ ಹಡಗಿನ ರೀತಿ ಇರಲಿದೆ. ನದಿ ಅಥವಾ ಸಮುದ್ರ ಮಾರ್ಗದಲ್ಲಿ ಸಂಚರಿಸಿ, ಕರಾವಳಿ ಮತ್ತು ನದಿ ಪಾತ್ರದಲ್ಲಿರುವ ಪ್ರಮುಖ ಪಟ್ಟಣಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಆಕರ್ಷಕವಾಗಿ ವಿನ್ಯಾಸಗೊಳಿಸಲಾದ ಜಲ ಮೆಟ್ರೋ ವೇಗವಾಗಿ ಚಲಿಸುವ ಮೂಲಕ ಪ್ರಯಾಣಿಕರನ್ನು ತ್ವರಿತವಾಗಿ ನಿರ್ದಿಷ್ಟ ಗಮ್ಯ ಸ್ಥಾನ ಸೇರಿಸುತ್ತದೆ. ಅಲ್ಲದೆ, ರಸ್ತೆಗಳಲ್ಲಿ ಉಂಟಾಗುವ ಸಂಚಾರ ದಟ್ಟಣೆ ಕಡಿಮೆಗೊಳಿಸಲು ಸಹಕಾರಿಯಾಗಿದೆ. ಜೊತೆಗೆ ತೀರ ಪ್ರದೇಶದಲ್ಲಿ ಸಂಪರ್ಕ ಜಾಲ ಬಲಗೊಂಡು ಪ್ರವಾಸೋದ್ಯಮ ಹಾಗೂ ವ್ಯಾಪಾರ ಚಟುವಟಿಕೆಗಳು ವೃದ್ಧಿಸಲಿವೆ.



ದಿಗಂತ ವಿಶೇಷ

> ಕರ್ನಾಟಕ ಜಲಸಾರಿಗೆ ಮಂಡಳಿಯು ಮಂಗಳೂರು ಹಳೇ ಬಂದರಿನ ಅಭಿವೃದ್ಧಿಯನ್ನು ಸರ್ವತೋಮುಖವಾಗಿ ಮಾಡಲಾಗುತ್ತದೆ. ಪ್ರಸಕ್ತ ಇರುವ ಬರ್ತ್‌ಗಳನ್ನು ಆಧುನೀಕರಿಸಲಾಗುತ್ತಿದೆ. ಇದು ಹಳೇ ಬಂದರನ್ನು ವ್ಯಾಪಾರ ತಾಣವನ್ನಾಗಿ ಮಾಡಲಿದೆ.
>
> ■ **ಜಯರಾಮ್ ರಾಯ್ಪುರ,**
> ಕರ್ನಾಟಕ ಜಲಸಾರಿಗೆ ಮಂಡಳಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ

### ಉಳ್ಳಾಲದಲ್ಲಿ ಎಂಐಸಿಟಿಪಿ ನಿರ್ಮಾಣ

ಮಂಗಳೂರು ಅಂತಾರಾಷ್ಟ್ರೀಯ ಕ್ರೂಸ್ ಅಂಡ್ ಟೂರಿಸಂ ಪೋರ್ಟ್ (ಎಂಐಸಿಟಿಪಿ) ನಿರ್ಮಿಸಲು ಮಂಡಳಿ ಮುಂದಾಗಿದೆ. ಮಂಗಳೂರಿನಿಂದ ದಕ್ಷಿಣಕ್ಕೆ 8 ಕಿ.ಮೀ. ದೂರದಲ್ಲಿರುವ ಉಳ್ಳಾಲದಲ್ಲಿ ನಿರ್ಮಿಸಲುದ್ದೇಶಿಸಿರುವ ಎಂಐಸಿಟಿಪಿಯ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಐಐಟಿ ಮದ್ರಾಸ್‌ಗೆ ವಹಿಸಲಾಗಿದೆ. ದೇಶದ ಬೇರೆಲ್ಲೂ ಇಲ್ಲದ ಕ್ರೂಸ್ ಅಥವಾ ಪ್ರವಾಸೋದ್ಯಮ ಬಂದರನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ)ದಲ್ಲಿ ಅಭಿವೃದ್ಧಿಪಡಿಸಲಾಗುತ್ತದೆ. ವಿಲಾಸಿ ಹಡಗುಗಳ (ಕ್ರೂಸ್) ಯಾನಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಈ ಬಂದರು ನಿರ್ಮಿಸಲಾಗುತ್ತಿಯಾದರೂ ಬಂದರಿನ ನಿರಂತರ ಕಾರ್ಯಾಚರಣೆಗಾಗಿ ಕ್ಲೀನ್ ಕಾರ್ಗೋಗೂ ಅವಕಾಶ ನೀಡಲಾಗುತ್ತದೆ.

### ಬೆಂಗ್ರೆಯಲ್ಲಿ ನೂತನ ಕೋಸ್ಟಲ್ ಬರ್ತ್

ಪ್ರಸಕ್ತ ಮಂಗಳೂರಿನ ಹಳೇ ಬಂದರು ಮುಖ್ಯವಾಗಿ ಮೀನುಗಾರಿಕಾ ಚಟುವಟಿಕೆಗಳಿಗಷ್ಟೇ ಸೀಮಿತವಾಗಿದೆ. ಸುಮಾರು 50 ಸರಕು ಹಡಗುಗಳಷ್ಟೇ ಇಲ್ಲಿಗಾಗಮಿಸಿ ತೆರಳುತ್ತವೆ. ಆದರೆ, ಇದು ಪ್ರವಾಸಿಗರನ್ನು ಮೋಡಿ ಮಾಡಲು ತನ್ನ ಪ್ರಾಚೀನತೆ ಉಳಿಸಿಕೊಂಡಿದೆ. ಇಂತಹ ಹಳೇ ಬಂದರನ್ನು ಆಧುನೀಕರಿಸಿ, ಜಲಸಾರಿಗೆಯ ಹಬ್ ಮಾಡುವುದಕ್ಕೆ ಜಲಸಾರಿಗೆ ಮಂಡಳಿ ರೂಪರೇಷೆ ಸಿದ್ಧಪಡಿಸಿದೆ. ಕಾರ್ಗೋಗೆ ಅನುಕೂಲವಾಗುವಂತೆ ಬೆಂಗ್ರೆಯಲ್ಲಿ ಕೋಸ್ಟಲ್ ಬರ್ತ್ ನಿರ್ಮಾಣ ಮಾಡಲಾಗುತ್ತಿದೆ.

### ಜಲಸಾರಿಗೆ ವಸ್ತುಸಂಗ್ರಹಾಲಯ ಸ್ಥಾಪನೆ

ಮಂಗಳೂರಿನಲ್ಲಿ ಜಲಸಾರಿಗೆ ವಸ್ತುಸಂಗ್ರಹಾಲಯವನ್ನೂ ನಿರ್ಮಾಣ ಮಾಡಲಾಗುತ್ತದೆ. ಮಂಗಳೂರು ಹಳೇ ಬಂದರು ಸಮೀಪ ಜಲಸಾರಿಗೆ ಮಂಡಳಿಯ ಸುಮಾರು ಒಂದುಕಾಲು ಎಕರೆ ಜಾಗವಿದೆ. ಅಲ್ಲೇ ವಸ್ತುಸಂಗ್ರಹಾಲಯ ನಿರ್ಮಿಸಲಾಗುತ್ತದೆ. ಈ ವಸ್ತುಸಂಗ್ರಹಾಲಯದಲ್ಲಿ ರಾಣಿ ಅಬ್ಬಕ್ಕನ ಪ್ರತಿಮೆ ಸ್ಥಾಪಿಸಲಾಗುತ್ತದೆ. ಜೊತೆಗೆ ಹಡಗು ಹಾಗೂ ಕರ್ನಾಟಕದ ಜಲಸಾರಿಗೆ ಇತಿಹಾಸವನ್ನು ತಿಳಿಸುವಂತಹ ಪ್ರಯತ್ನ ಮಾಡಲಾಗುತ್ತದೆ.

### ಸೆ.15ರಿಂದ ಹಳೇ ಬಂದರಿನಲ್ಲಿ ಡ್ರೆಜ್ಜಿಂಗ್

ಮಂಗಳೂರು ಹಳೇ ಬಂದರಿನ ದಕ್ಕೆಯಲ್ಲಿ ಹೂಳು ತುಂಬಿರುವುದರಿಂದ ದೋಣಿಗಳು, ಸರಕು ಹಡಗುಗಳ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಹಳೇ ಬಂದರಿನಲ್ಲಿ ಡ್ರೆಜ್ಜಿಂಗ್ (ಹೂಳೆತ್ತುವುದು) ಕಾರ್ಯ ಸೆ.15ರಿಂದ ಪ್ರಾರಂಭವಾಗಲಿದೆ. ಈಗಾಗಲೇ ಮಂಡಳಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿದೆ. ಒಟ್ಟು 30ಕೋಟಿ ರೂ. ವೆಚ್ಚದಲ್ಲಿ ಡ್ರೆಜ್ಜಿಂಗ್ ನಡೆಸಲಾಗುತ್ತದೆ ಎಂದು ಮಂಡಳಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ತಿಳಿಸಿದ್ದಾರೆ.